TEXT PROBLEM WITHIN THE BOOK ONLY

UNIVERSAL
LIBRARY
OU_202314
UNIVERSAL
LIBRARY

# ಮೂಕನ ಮಕ್ಕಳು

ಶ್ರೀನಿವಾಸ

ಹತ್ತು ಆಣೆ

ಮೊದಲನೆಯ ಮುದ್ರಣ ೧೯೪೩

ಎಲ್ಲ ಹಕ್ಕುಗಳನ್ನೂ ಕಾದಿದೆ

ಬೆಂಗಳೂರು ಪ್ರೆಸ್, ಮೈಸೂರು ರೋಡು, ಬೆಂಗಳೂರು ಸಿಟಿ
೧೯೪೩

# ಮೂಕನ ಮಕ್ಕಳು

## "ರಾಮನವಮಿ"ಯ ಜವರಗೌಡರು ಹೇಳಿದ ಇನ್ನೊಂದು ಸಂಗತಿ

**ಗೌಡರು**

ಗಾಳಿಹನುಮನಗಿರಿಯ ಮುಂಗಡೆ
ಮೋಡಿನಲಿ ಮರ ಮೂರಿವೆ.
ಕಂಡುದುಂಟೇ ಒಡೆಯರವನು?
ಒಮ್ಮೆ ಬಂದರೆ ತೋರುವೆ.

ಗಾಳಿಹನುಮನಗಿರಿಯ ಮುಂದಣ ಮೂರು ಮರವನ್ನು ಜನ ಮೂಕನ ಮಕ್ಕಳು ಎನ್ನುತ್ತಾರೆ.

ಗಿರಿಯ ಮುಂಗಡೆ ಮೋಡ ತಲೆಯಲಿ
ನಿಂತು ಮೂರೂ ಒಟ್ಟಿಗೆ
ತಳಿರುತುಂಬಿದ ದಿನಕೆ ತುಂಬಾ
ಚೆನ್ನ,. ನೋಡುವ ದಿಟ್ಟಿಗೆ.

ಒಂದೆ ಮಡಲಲಿ ಬೆಳೆದು, ಒಂದನು
ಒಂದು ನೋಡುತ ನುಡಿಸುತ,
ಒಂದು ಬಾಳುವೆಬಾಳಿ, ನೋಡುವ
ಮಂದಿಯನು ಸುಖಪಡಿಸುತ,

## ಮೂಕನ ಮಕ್ಕಳು

ಮಲೆಗೆ ಬಯಲಿಗೆ ಸುತ್ತ ಹರಹಿದ
  ನೆಲಕೆ ಭೂಷಣವಾಗಿವೆ.
ಮೇಡಿಗೆನಿತೋ ಸಾರಿ ನಾ ಇವ
  ನೋಡಲೆಂದೇ ಹೋಗುವೆ.

ಇವನು ಮೂಕನ ಮಕ್ಕಳೆಂಬರು
  ಸುತ್ತಿನೆಲ್ಲಾ ಊರಲಿ;
ಮೂಕ ಎನ್ನುವ ಹೆಸರ ನೆನೆವರು,
  ಯಾರೆ ನಿಮಗಿವತೋರಲಿ.

## ಕತೆಗಾರ

ಮರಳಿ ಬೋವನಹಳ್ಳಿಯೆಡೆ ನಾ
  ಒಂದು ಉದಯದಿ ಸುಳಿಯುತ,
ಬಸರಿಮರದಡಿ ಜವರಗೌಡರು
  ತಮ್ಮ ತಮ್ಮಲಿ ತಿಳಿಯುತ,

ಕತೆಗಾರನು ಮರಳಿ ಗೌಡರನ್ನು ಕಂಡಾಗ ಅವರು ಈ ಮಾತನ್ನು ಹೇಳಿದರು;

ಉಣ್ಣೆ ನೂಲುತ ಧ್ಯಾನಮಾಡುತ
  ಕುಳಿತಪರಿಯನು ನೋಡಿದೆ;
ಸುಳಿವ ಬಣ್ಣಿಸಿ ಗಾಳಿಹನುಮನ
  ಗಿರಿಯಮಾತನು ಆಡಿದೆ.

## ಮೂಕನ ಮಕ್ಕಳು

ಗಾಳಿಹನುಮನ ಗಿರಿಯ ಮಾತಿಗೆ
ಗೌಡರೀಕತೆ ಒರೆದರು ;
ನುರಿತ ಅನುಭವದವರ ಮನವನು
ನನ್ನ ನೋಟಕೆ ತೆರೆದರು.

### ಗೌಡರು

ಮೂಕ ನಮ್ಮೂರವನೆ ಹೈದ ;
ನಟ್ಟು ಹೊರೆದನು ಮರ ಇವ ;
ಇದರ ಪರಿಯನು ಬಲ್ಲೆ ನಾನು ;
ಕೇಳುವಿರೆ, ಮನ ಕರಗುವ

ಮೂಕನದು ಮನ
ಕರಗಿಸುವ ಕತೆ,
ಹೊತ್ತಿದ್ದರೆ ಹೇಳು
ತ್ತೇನೆ, ಎಂದರು.

ಚರಿತ ಅವನದು ; ಹೊತ್ತಿರುವುದೇ
ಒಡೆಯರಿಗೆ, ಅದ ಒರೆವೆನು ;
ದೈವ ನಾಲಗೆ ಕೊಡದೆ ಕಾಡಿದ
ಪಾಪಿ ಬದುಕಿದ ತೆರನನು.

### ಕತೆಗಾರ

ಹೇಳಿ ಗೌಡರೆ ಕೇಳಹೊತ್ತಿದೆ,
ಎಂದು ನಾ ಮರುನುಡಿಯಲು
ಗೌಡರೊರೆದರು ; ಅವರ ಮನಸೇ
ಮಾತಿನಲಿ ಕುಡಿಯೊಡೆಯಲು.

ಕತೆಗಾರನು ಹೊತ್ತಿದೆ
ಹೇಳಿ ಎಂದನು.

## ಮೂಕನ ಮಕ್ಕಳು

### ಗೌಡರು

ಮೂಕ ನಮ್ಮೂರವನೆ ಹೈದ;
ನೋಡಿ ನನ್ನದು ಅವನದು
ಒಂದೆ ಪ್ರಾಯ ಸುಮಾರು; ಅವನ
ಕರ್ಮ ಬೇಗನೆ ಸವೆದುದು.

ಗೌಡರು ಹೇಳಿದ

ಮೂಕ ಅವರ
ಊರವನು ಅವ
ಜೊತೆ.

ಮೂಕ ಎಂಬುದು ಹೆತ್ತ ತಾಯಿ
ಇಟ್ಟ ಹೆಸರಿನ ಓಸರ;
ಕರೆವ ದಿನದಲಿ ಅವಳು ಕಾಣಳು
ಇವನ ಪ್ರಾಪ್ತಿಯ ಬೇಸರ.

ವಿಧಿವಿಲಾಸವನಾರುಬಲ್ಲರು?
ಕರೆದುದೇ ದಿಟವಾಯಿತು;
ದಿವಸ ಕಳೆಯಿತು, ಬೆಳೆದ ಹುಡುಗಗೆ
ಬಾಯಿ ಇಲ್ಲದೆಹೋಯಿತು.

ಮೂಕ ಎನ್ನುವುದು
ಇಟ್ಟ ಹೆಸರು.
ಗ್ರಹಚಾರಕ್ಕೆ ನಿಜವೇ
ಆಯಿತು.

ಕೆಂಚ ಎನ್ನರೆ ಕರಿಯ ಕೊಂತವ?
ಗರುಡ ಎನೆ ಗರಿ ಬರುವುದೆ?
ಕಾಳ ಎನ್ನರೆ ಹೇಡಿ ಹುಡಗನ?
ತಿಪ್ಪ ಎನೆ ಮನೆ ತೊರೆವುದೆ?

## ಮೂಕನ ಮಕ್ಕಳು

ಮೂಕನಾಗಲಿಬೇಕೆ ತಾಯಿ
ಮಗುವ ಮೂಕ ಎಂದರೆ?
ಅವಳ ತಪ್ಪೇ, ಅವನು ತಾನು
ಕೇಳಿಬಂದುದ ತಂದರೆ?

ಮೂಕ ಮೂಕನೆ ಆಗಿ, ಊರಲಿ
ನಮ್ಮ ಜೊತೆಯಲಿ ಬೆಳೆದನು;
ದೈವ ಅವನಿಗೆ ಹಾಕಿ ತೋರಿದ
ಬಾಳದಾರಿಯ ತುಳಿದನು.

ಅವನ ಎಳೆತನದಲ್ಲೆ ಮಡಿದಳು
ತಾಯಿ; ಮಗ ತನ್ನಷ್ಟಕೆ
ಕೂಲಿನಾಲಿಯ ಎಂತೊ ತಿನ್ನುತ
ಎರವು ಹೋದ ಅದೃಷ್ಟಕೆ.

ಬಾಲ್ಯದಲ್ಲಿ ಅವನ ತಾಯಿ ತೀರಿಕೊಂಡಳು, ಮೂಕ ಎಂತೋ ಬಾಳಿದ.

ಮೂಕನಾದವ ಬಡವನಾಗಿರೆ
ದೈವಕಿಂತಲು ಹೆಚ್ಚಿಗೆ
ಕಾಡುವುದು ಜನ ಅವನ; ಎಳೆವುದು
ಎಲ್ಲುಂ ಇಲ್ಲದ ರೊಚ್ಚಿಗೆ.

ಮೂಕನಾದದ್ದರಿಂದ ಜನ ಅವನನ್ನು ಕಾಡುವರು.

## ಮೂಕನ ಮಕ್ಕಳು

ಅರಿಯದೆಳೆಯರು ಮಾತ್ರ ಅಲ್ಲ
ಇಂತುಗೆಯ್ವುದು: ಮುದುಕರು
ಮುಂದೆ ನಿಲುವರು, ಇಂತ ಪಾಪಿಯ
ನೋವಿನಾಳವ ಕೆದಕಲು.

ಊರಮುಂದಿಯ ಪಾರುಪಾಟಕೆ
ಸಿಲುಕಿ, ಚಿರತೆಯ ತೆರದಲಿ,
ಹರೆಯಕೈದಿದ ಮೂಕ; ಕೊಲುತಿರೆ
ಸಾಯಬಾರದ ನರಬಲಿ.

ಬಾಯನೀಡದ ದೈವ ಒಡಲಿನ
ಬೇರೆ ಆಸೆಯ ನೀಡದೆ?
ಹರೆಯ ಮೂಕಗೆ ಹೆಣ್ಣ ಹಂಬಲ
ತಾನೆ ತಂದಿತು ಬೇಡದೆ.

ಹರೆಯ ಬಂದು
ಮೂಕನಿಗೆ ಹೆಣ್ಣಿನಾಸೆ
ಹುಟ್ಟಿತು.

ಹರೆಯಬರೆ ನಮ್ಮಂಥ ಮಂದಿಗೆ
ಮದುವೆಗೆಯ್ವರು ಹಿರಿಯರು;
ತಾಯಿ ಮಡಿದಿಹ ಬಡವ ಮೂಕಗೆ
ಯಾರು, ಹೆಣ್ಣನು ತರುವರು?

ಮದುವೆಯಾಗು
ವಂತಿಲ್ಲ.

## ಮೂಕನ ಮಕ್ಕಳು

ಕೆಪ್ಪನೆನ್ನುತ ಇವನ ಎದುರಲಿ
ಸದರ ನುಡಿವರು ಹೆಂಗಳು,
ತುಟಿಯ ಕಡೆಯಲಿ ತುಳುಕುತಿರೆ ನಗೆ,
ನಕ್ಕು ಹೊಳೆದಿರೆ ಕಂಗಳು.

ಮೂಕನೆಂದು ಹೆಂಗಸರು ಇವನೆದುರಿಗೆ ಅತಿ ಸಲಿಗೆಯಿಂದ ನಡೆಯುವರು.

ಒಂದು ಹೆಣ್ಣಿಂತಾಟ ಆಡಿಸೆ
ನೋಡಿ ತಡೆಯನು ಮಾನವ;
ಹತ್ತು ಹೆಣ್ಣಿನ ನಗೆಯಲದ್ದರೆ
ಹೇಳಲೇನು ನಿದಾನವ?

ಕೇಳಲಮ್ಮದು; ಆಡಲಮ್ಮದು;
ನೋಡಲಮ್ಮದೆ ಮೂಕಗೆ?
ಮೂರು ಹೊಲಬಿನ ಹೊಗರ ಕಣ್ಣಿನ
ನೋಟ ಮಿಕ್ಕಿತು ಸೋಕಿಗೆ.

ಆಡಿಸುವ ಜನ ಸೈಗೆಮಾಡುತ
ಮದುವೆಯಹೆಯಾ ಎಂಬರು:
ನುಡಿಯೆ ನಾಚುವ ಹದನ ಕೈಯಲಿ
ಸನ್ನೆ ತೋರುತ, ಹುಂಬರು.

ಭಂಡರು ಆಸೆಯನ್ನು ಕೆರಳಿಸುವರು.

ಮದುವೆಯಾಗುವ ಬಾರ ಎಂಬರು
ಹೆಣ್ಣುಮಕ್ಕಳು, ಆಟಕೆ:
ಕಾಡಿ ಆಡಿರೆ ಅವರು, ಮೂಕನ
ಮನಸು ಹರಿವುದು ಬೇಟಕೆ.

ತಿಳಿಯದವರಿಂತಿವನ ಕಾಡಿರೆ
ನಾವು ಒಬ್ಬರು ಇಬ್ಬರು
ಬೇಡವೆಂಬೆವು: ಏನು ಫಲ? ಜನ
ನಮ್ಮ ಅಂಕೆಗೆ ಅಬ್ಬರು.

ಗೌಡರಂತವರು ಹೀಗೆ
ಮಾಡಬೇಡಿ ಎಂದರು.
ಆದರೂ ಕಾಟ
ತಪ್ಪಲಿಲ್ಲ.

ಒಂದು ಸಲ ಸುಗ್ಗಿಯಲಿ, ನಾನು
ಗಿರಿಯ ಮುಂಗಡೆ ಹೊಳೆಯಲಿ
ಹೊಂಗೆಯಡಿ ನಡೆದಿರಲು, ಮೂಕ
ಕಂಡನೆನಗಾ ಬಳಿಯಲಿ.

ಒಂದು ಸುಗ್ಗಿಯಲ್ಲಿ
ಮೂಕನಿಗೆ
ಹೆಣ್ಣ ಹಂಬಲ
ಬಹು ಹೆಚ್ಚಾಯಿತು.

ತನ್ನ ದನಿಯಲಿ ಕರೆದು, ಹತ್ತಿರ
ಸಾರಿ, ಎನ್ನಲಿ ತನ್ನ ಆ
ಸೈಗೆವಾತಲಿ ಒರೆದ: ಬಲ್ಲೆನು
ನಾನು ಅವನಾ ಸನ್ನೆಯ.

# ಮೂಕನ ಮಕ್ಕಳು

ಹೊಳೆಯ ಮರಳಿನಮೇಲೆ ಹೊಂಗೆಯ
ನೆರಳಿನಲಿ ನಲಿದಾಡಿದ
ಕಾದಲರ ಆಟವನು ಮೂಕ
ಎಲ್ಲೊ ನಿಲ್ಲುತ ನೋಡಿದ.

ಮದುವೆಯಾಗೆನೆ ಎಂಬ ಆಸೆ
ಮಸಗಿತವನೆದೆಗೂಡಲಿ;
ಏನಮಾಡಲಿ, ಎಲ್ಲಿ ಹೋಗಲಿ,
ಯಾರ ಹಿಡಿಯಲಿ, ಬೇಡಲಿ,

ಎಂದು ತುಡಿಯುತ ನನ್ನ ಕರೆದನು:
ಒಂದು ಹೆಣ್ಣನು ನೋಡಿಸಿ,
ಕಷ್ಟ ಸುಖ ಏನಾದರಾಗಲಿ,
ನನಗೆ ಮದುವೆಯ ಮಾಡಿಸಿ,

ಏನಾದರೂ ಮಾಡಿ ನನಗೆ ಮದುವೆ ಮಾಡು ಎಂದು ಅವನು ಗೌಡರನ್ನು ಬೇಡಿದನು.

ಎಂದು ನನ್ನನು ಬೇಡಿಕೊಂಡನು.
ಅಯ್ಯೊ ಎಂದಿತು ನನ್ನೆದೆ.
ದಿಕ್ಕುಗಾಣದ ಕುನ್ನಿ, ಪಾಪ,
ಬಿದ್ದನೆಂತಹ ಬನ್ನದೆ.

ಗೌಡರು ಅಯ್ಯೋ ಪಾಪ ಎಂದು ನೊಂದರು.

## ಮೂಕನ ಮಕ್ಕಳು

ದಿವಸ ಕಳೆದಿರೆ ನಮ್ಮ ಊರಿಗೆ
ಒಬ್ಬ ಹಿರಿ ಅವಧೂತರು
ಬಿಜಯಗೆಯ್ದರು : ಹೇಳಲಾಗದು
ಅಂಥ ಅನುಭವಿ, ವೇತ್ತರು.

ಆಗ್ಗೆ ದೋವನಹಳ್ಳಿಗೆ
ಒಬ್ಬ ಅವಧೂತರು
ಬಂದರು.

ಲೋಕದಲಿ ಅವಧೂತರೆನಿಸುವ
ಬಹು ಜನದ ಅವಧೂತಿಕೆ
ನೀರು ನಿಲ್ಲದ ಸೋರು ಹರವಿ ;
ಮೊದಲೆ ಕೊನೆಯೆ ತೂತಿಗೆ ?

ಅವರು ಬಹು
ಒಳ್ಳೆಯವರು.

ಸೋರು ಹರವಿಯೊ ನೀರು ನಿಲುವುದೊ
ಎಂತು ತಿಳಿವುದು, ಮೊದಲಲಿ ?
ಸೇವೆ ಮಾಡಿಯೆ ಕಾಣಬೇಕಿದ
ಮುಗಿದ ಕೈಯಿಟ್ಟಿದೆಯಲಿ.

ಸೇವೆ ಮಾಡಿತು ಊರು ಯೋಗಿಗೆ ;
ಯೋಗ್ಯನೆಂಬುದ ಕಂಡಿತು ;
ಬೊಮ್ಮವನು ಕೈಮುಟ್ಟ ತಿಳಿದಿಹ
ಗುರು, ನಮೋ ನಮೊ, ಎಂದಿತು.

ಊರು ಅವರನ್ನು
ಪೂಜಿಸಿತು.

ಅಂತೆ ನಾನೂ ಅವರ ಪಾದದಿ
  ದಿಟದ ಇನಿತನು ಅರಿತೆನು.
ಅದರೊಳಿನಿಸನು ಬಲ್ಲೆ ನೀಗಳು
  ಉಳಿದ ಬಹಳವ ಮರೆತೆನು.

ಬಳಿಗೆ ಯಾರೇ ಬಂದು ಏನನೆ
  ಬಿನ್ನವಿಸೆ, ಗುರುದೇವರು
ಕೇಳುವರು ಕಿವಿಗೊಟ್ಟು; ನೋವಿಗೆ
  ನೊಂದು ತಾವೂ ಬೇವರು.

ಅವಧೂತರು
ಕನಿಕರ ಮರುಕದ
ಸ್ವಭಾವದ
ಜ್ಞಾನಿಗಳು.

ಅಯ್ಯೊ, ಪಾಪವೆ, ಎಂದು ಕರಗಿ
  ಮತ್ತೆ ಧೃತಿಯನು ತಳೆವರು;
ನೋವ ಸಹಿಸುವ ತೆರನ ಕಲಿಸುತ
  ಮನದ ಕಶ್ಮಲ ಕಳೆವರು.

ನೊಂದ ಜನ ಬಲ್ಲವರ ಎದುರಲಿ
  ಮರೆಸಿಕೊಂಬುದು ನೋವನು;
ಇಲ್ಲಿ ಮರುಗಲು ಸಲ್ಲ ಎನ್ನುತ
  ಅರಸಿ ಬೇರೆಯ ತಾವನು.

ನಮ್ಮ ಗುರುವಿನ ದಾರಿ ಬೇರೆ:
ನೊಂದ ಜನ ಇವರಡಿಯನು,
ತಾಯ ಸಾರುವ ಕಂದನಂದದಿ
ಸಾರಿ, ಹಾದಿತು ಕಡೆಯನು.

ನೋವು ನಗೆಯನು ಸುಳ್ಳು ಎನ್ನುವ
ಕಣ್ಣುಕಟ್ಟಿನ ತತ್ತ್ವವ
ಇವರು ಒಪ್ಪರು: ಹಸಿವತಣಿಸಲು
ಅಡರು ಬರಗಿನ ಬತ್ತವ.

ಯಾವುದೋ ಚೇತನವ ಹೊರೆಯಲು
ಬಹರು ಇಂತಹ ಹಿರಿಯರು
ಅಂದು ಯಾರನು ಹೊರೆಯಬಂದರೊ
ಈ ಹದನ ಯಾರರಿವರು?

ಇಂತವರು ಯಾರನ್ನೋ ಉದ್ಧಾ ಮಾಡಲು ಒಂದು ಸ್ಥಳಕ್ಕೆ ಬರುತ್ತಾರೆ.

ಕಾರದಿನ ಆಗಸವ ಮುಸುಕಿದ
ಮೋಡಗಳು ತಂತಮ್ಮಲಿ
ನುಡಿದುಕೊಂಬವು; ಕಾದ ಅವುಗಳ
ಓಡು ಬಿರಿಯುವುದೊಮ್ಮಲೆ.

ಕಾರದಿನದ ಮೋಡ ಬಿರಿದು ಯಾವುದೋ ಒಂದು ಮರದಮೇಲೆ ಬೀಳುವ ಬಿಸಿಲಂತೆ,

## ಮೂಕನ ಮಕ್ಕಳು

ಬಿರಿದ ಬಿರುಕಲಿ ಸೂರ್ಯ ಕಿರಣ
ಒಂದೆ ರಭಸಕೆ ಸುರಿವುದು ;
ವನದ ಯಾವುದೊ ಮರದ ಶಿರದಲಿ
ಬೆಳಕ ಕೃಪೆಯನು ಕರೆವುದು.

ಇಂಥವರ ಕೃಪೆ
ಯಾರನ್ನೋ
ಕಾಯಲು
ಬರುತ್ತದೆ.

ವನದ ಬೇರೆಯ ಮರಕೆ ಮುನ್ನವೆ
ಪಕ್ವವಾಗುವುದಿದರೆಲೆ ;
ಮಾಘ ಬರೆ, ತೊಡಗುವುದು ಈ ಎಲೆ
ಉದುರಲೆಲ್ಲಕು ಮೊದಲಲೆ.

ಯಾವ ತಪವನು ಮಾಡಿತೋ ಮರ ?
ಎಂತು ತಣಿಸಿತೊ ನೇಸರ ?
ಎಂದು ತಣಿಸಿತೊ ? ಇದನು ಬಲ್ಲರು
ಯಾರು ? ಬಲ್ಲನು ಈಶ್ವರ.

ಎಲ್ಲ ಮಂದಿಯು ಗುರುವಸಾರಿ
ಏನು ಏನನೊ ಪಡೆವುದ
ನೋಡುತಿದ್ದನು ಮೂಕ ; ತಾನು
ಏಕೆ ಬೇಡದೆ ಬಿಡುವುದು ?

ಎಲ್ಲರೂ ಗುರುವನ್ನು
ಆಶ್ರಯಿಸುವುದನ್ನು
ನೋಡಿ ಮೂಕನೂ

## ಮೂಕನ ಮಕ್ಕಳು

ಮೂಕ ಗುರುವಿನ ಬಳಿಯ ಸಾರಿದ;
ಮೆಯ್ಯ ಕಾಲೆಡೆ ಚಾಚಿದ.
ನುಡಿಸಿದರು: ನುಡಿ ಇಲ್ಲ ಎನ್ನುತ
ಸನ್ನೆ ಮಾಡುತ ನಾಚಿದ.

ಅವರ ಬಳಿಸಾರಿದ.

ಇವನಪರಿ ಎಲ್ಲವನು ಗುರುವಿಗೆ
ನಾನು ಹೇಳಿದೆ. ಕೇಳುತ
ಮರುಕಗೊಂಡರು. ಎನಿತು ಎನ್ನಲಿ?
ಅವರದೇ ಆ ಹಾಳತ.

ಅವನ ಆಸೆಯನ್ನು ಗೌಡರು ಗುರುಗಳಿಗೆ ತಿಳಿಸಿದರು.

ಗುರು ಕನಿಕರ ಗೊಂಡರು.

ಮರುಕಗೊಳ್ಳುತ ಒಂದು ಗಳಿಗೆ
ಮೌನದಲಿ ಕುಳಿತಿದ್ದರು;
ಯಾವ ಎಂತಹ ಗಹನಗಳನೋ
ತಮ್ಮ ಮನದಲೆ ಮೆದ್ದರು;

ಯೋಚನೆಮಾಡಿ ಇವನು ಹೇಗೆಯೋ ಉದ್ಧಾರವಾಗುತ್ತಾನೆ ಎಂದರು.

ಮೆದ್ದು ನುಡಿದರು: ಮೂಕನಾಗಿ
ಹೆಣ್ಣನಾಶಿಸಿ ಪಡೆಯದೆ
ನೊಂದ ಈತನೆ ಪುಣ್ಯಶಾಲಿ;
ಇವನ ಆಸೆಗೆ ಕಡೆಯಿದೇ.

## ಮೂಕನ ಮಕ್ಕಳು

ಪುಂಡಜನ ಬೈರಾಗಿಒಬ್ಬನ
ಅಟ್ಟಿಬರೆ, ಮುಂದೋಡುತ
ಯಜ್ಞವಾಟವ ಹೊಕ್ಕನವನು.
ಇಂತು ಇವನನು ಕಾಡುತ,

ಬಿಡುಗಡೆಗೆ ವಿಧಿ ಅಟ್ಟೆತಿವನನು.
ನಮ್ಮ ಸಲಹುವ ಕರುಣೆಯೆ
ಬೇರೆ ತೆರದಲಿ ಸಲಹಿತಿವನ;
ಇದು ನಿರಾಶಾಪರಿಣಯ.

ಗುರುವನೆನೆವೆನು, ಇವನ ರಕ್ಷಿಪ
ಪರಿ ಇರಲು ಅದನರಿವೆನು,
ಎನಲು, ಮೂಕಗೆ ನಾನು ತಿಳಿಸಿದೆ
ಆದನಿತು ಈ ತೆರನನು.

ಗುರುವಿನೆಡೆ ಶುಶ್ರೂಷೆಯಲಿ ನಿಲು,
ಎಂದು ಸನ್ನೆಯ ಗೆಯ್ದೆನು;
ಆಸೆ ಕೈಯನು ಸಾರಿತೆಂದೇ
ಅವನು ಮುಸಮುಸಸುಯ್ದನು.

ಗುರುವಿನ ಬಳಿ
ಶುಶ್ರೂಷೆಯಲ್ಲಿ ನಿಲ್ಲು
ಉದ್ಧಾರವಾಗು
ತ್ತೀಯೆ ಎಂದು
ಗೌಡರು ಮೂಕನಿಗೆ
ತಿಳಿಸಿದರು.

## ಮೂಕನ ಮಕ್ಕಳು

ಗುರುವಿನಡಿಯನು ಮುಟ್ಟಿ ಕಣ್ಣಿಗೆ
ಒತ್ತಿಕೊಂಡನು ; ಬಳಿಯಲಿ
ಸೇವೆ ಮಾಡುವ ಭರದಿ ನಿಂತನು,
ಮದುವೆಯಹ ಕಳಕಳಿಯಲಿ.

ಮದುವೆಮಾಡುವ
ರೆಂದು ಅರ್ಥಮಾಡಿ
ಕೊಂಡು ಅವನು
ಹಾಗೆಯೇ ನಿಂತನು.

ಮೂರನೆಯ ದಿನ ಉದಯ, ಇವನ
ಬಳಿಗೆ ಕರೆದವಧೂತರು,
ಹಿರಿಯ ನನಗೇ ಮದುವೆ ಇಲ್ಲಲೆ,
ನಿನಗೆ ಏತಕೆ ಆತುರ,

ಕೆಲವು ದಿನದಮೇಲೆ
ಅವರು ಮೂಕನನ್ನು
ನನಗೇ ಮದುವೆ ಇಲ್ಲ
ನಿನಗೇನು ಆತುರ
ಎಂದು ಕೇಳಿದರು.

ಎಂದು ಕೇಳಿದರಂತೆ. ಮೂಕ
ಏನ ಹೇಳಲು ತೋರದೆ
ಸುಮ್ಮನಿದ್ದನು, ಹರಿಸಲಾಗದ
ಈ ಸಮಸ್ಯೆಯ ಭಾರದೆ.

ಮೂಕನಿಗೆ ಉತ್ತರ
ತೋರಲಿಲ್ಲ.

ಕ್ಷಣ ಉಳಿದು ಗುರು, ಅಣ್ಣ, ನಿನಗೆ
ಹೆಣ್ಣು ಬೇಕೊ, ಮಕ್ಕಳೊ,
ಎಂದು ಕೇಳಲು, ಮೂಕ, ತನಗೆ
ಯಾವ ಹೆಣ್ಣೂ ಸಿಕ್ಕಳು,

ಅವರು ಹೆಣ್ಣು ಬೇಕೋ
ಮಕ್ಕಳು ಬೇಕೋ,
ಎಂದರು.

## ಮೂಕನ ಮಕ್ಕಳು

ಮಕ್ಕಳಾದುವೆ ಸಾಕು, ಎಂದನು.
ಒಳಿತು, ಎಂದರು ಗುರುಗಳು;
ಜೊತೆಗೆ ಬಾರೆಂದಿವನ ಕರೆದು
ಮೇಡಿನಲಿ ಈ ಮರಗಳು

ಇವನು, ಮಕ್ಕಳು,
ಎಂದನು.
ಗುರು ಇವನನ್ನು
ಕರೆದೊಯ್ದು

ಈಗ ನಿಂದಿರುವೆಡೆಗೆ ಒಯ್ದರು;
ಹೊಯಿಸಿದರು ಕುಳಿ ಮೂರನು;
ಹೊಳೆಯ ಅಂಚಿಗೆ ಸಾರಿ ಸೊಂಪಿನ
ತೆರ ತೆರದ ಸೊಸಿ ನೂರನು

ಮೇಡಿನಲ್ಲಿ ಮೂರು
ಕುಳಿ ಹೊಯಿಸಿ

ತೋರಿ, ಚೆನ್ನನ ಮೂರು ಸೊಸಿಯನು
ನೀನೆ ಆರಿಸು ಎಂದರು;
ಅವನು ಕೋರಿದ ಮೂರ ಬೇರಿನ
ಸಹಿತ ಮೇಡಿಗೆ ತಂದರು;

ಹೊಳೆಯ
ದಂಡೆಯಿಂದ
ಮೂರು ಸೊಸಿ ತರಿಸಿ

ಮೂಕನಿಂದಲೆ ಅವನು ನೆಡಿಸಿ
ನೀರೆರೆಸಿ, ಅಣ್ಣಾ, ಇವು
ನಿನ್ನ ಮಕ್ಕಳು, ಇವನು ಮುದ್ದಿಸು,
ಇನ್ನು ಇವರನು ಕಾಯುವ

ಇವನಿಂದ ನೆಡಿಸಿ,
ಇವು ನಿನ್ನ ಮಕ್ಕಳು,
ಇವನ್ನು ಸಾಕು,
ಎಂದರು.

ಭಾರ ನಿನ್ನತುನೋಡು, ಎಂದರು. ಮೂಕ ಒಪ್ಪಿದ.
ಒಪ್ಪಿ ತಲೆಯನು ಆಡಿಸಿ,
ಮೂಕ ಗುರುವಿಗೆ ಮಣಿದು ನಿಂದ
ಭಕ್ತಿಯಲಿ ಕೈ ಜೋಡಿಸಿ.

ಗುರುವಿನಾವ ಹಸಾದವೋ ಅದು, ಅವನ್ನು ಸಾಕಿದ.
ಮೂಕ ಆ ಸೊಸಿ ಮೂರನು
ಮಕ್ಕಳೆಂದೇ ಬಗೆದು ಹೊರೆದನು;
ಬೇರೆ ಭಾವವ ತೋರನು.

ಬಿಸಿಲಿನಲಿ ಗಿಡ ಸೊರಗದಂದಕೆ ಅವಕ್ಕೆ ಬೇಲಿ ಹಾಕಿದ.
ಮೂಕ ನೆರಳನು ಎಸಗಿದ;
ಆಡು ದನ ಸೊಸಿಗಳನು ಮುಟ್ಟದ
ತೆರಕೆ ಮುಳ್ಳಿನ ಮುಸಕದ

ಬೇಲಿ ಕಟ್ಟದ ಸುತ್ತ; ದಿನಕೆ ನೀರು ಹೊಯ್ದ,
ಮೂರು ಸಲ ನೀರೆರೆಯುತ, ಅವನ್ನು ಮಕ್ಕಳೇ
ಗುರುವಿನಾಜ್ಞೆಯ ನಡೆಸಿ ನಿಂತ ಎಂದು,
ಮಕ್ಕಳೆಂದವ ಹೊರೆಯುತ.

## ಮೂಕನ ಮಕ್ಕಳು

ಯಾವ ತಾಯೂ ಹೆತ್ತ ಮಕ್ಕಳ
ಇದಕೆ ಹೆಚ್ಚಿಗೆ ಹೊರೆಯಳು;
ಸೊಸಿಯು ಸಲಹಿದನಂತು ಮೂಕ
ಮೇರೆ ಹರಿದಕ್ಕರೆಯೊಳು.

ಯಾವ ತಾಯಿಗಿಂತ ಹೆಚ್ಚಾಗಿ ಈ ಮಕ್ಕಳನ್ನು ಲಾಲಿಸಿದ.

ತಾಯಿ ತಂದೆಯ ಎರಡು ಪ್ರೀತಿ
ಮೂಕನೊಂದೇ ಎದೆಯಲಿ
ಬೆರೆದು ಇಮ್ಮಡಿಯಾಯ್ತು. ಅವನಿಗೆ
ಎಲ್ಲ ಹೊತ್ತಲು ಇದೆ ಗಿಲಿ:

ಅವಕ್ಕೆ ತಾಯಿ ತಂದೆ ಎರಡೂ ತಾನೇ ಆದ.

ಚಿಗುರು ಕಂಡಿತೊ, ಕೊಂಬು ಹುಟ್ಟಿತೊ,
ಆಡು ತಿಂದಿತೊ ಸೊಸಿಗಳ,
ಮನೆಯ ಮಕ್ಕಳ ಇಂತು ಓವರು
ಯಾರು? ಹೇಳಲು ಅಸದಳ.

ನೀರನೆರೆವನು; ಅಲ್ಲೆ ನಿಂತು
ಪಾತಿಯಲಿ ಅದು ಇಳಿವುದ
ನೋಡಿ ಸಂತಸದಿಂದ ತಣಿವನು;
ಮರಳಿ ಹಳ್ಳಕೆ ತಳುವದೆ

ಮೂಳಕನ ಮಕ್ಕಳು

ಓಡಿಹೋಹನು, ನೀರ ತರುವನು,
ಮರಳಿ ಸುರಿವನು ಪಾತಿಗೆ;
ಗಿಡ ತಣಿಯೆ ತಾ ತಣಿದೆ ಎಂಬನು.
ಸಹಜವಿದು ತಾಯ್‌ಜಾತಿಗೆ.

ಕೂಸು ದಿನ ದಿನ ಇನಿಸು ಬೆಳೆವುದ
ತಾಯಿ ಕಾಣುವ ತೆರದಲಿ
ಮೂಕ ಅರಿತನು ಸೊಸಿಯ ಬೆಳವಿಯ ;
ಅವನ ನರ ನರ ನರದಲಿ

ಅವು ದಿನದಿನಕ್ಕೆ ಬೆಳೆಯುವುದನ್ನ ಕಳಕಳಿಯಿಂದ ದಿಟ್ಟಿಸಿದ.

ಅದರ ಸೌಖ್ಯದ ಹಸರ ಹರಿಯಿತು ;
ಅವನ ಮುಖ ಆಭಾವದ
ಬೆಳಕ ತಳೆಯಿತು. ಶ್ರದ್ಧೆಯೇ ತಪ:
ಬೇರೆ ತಪ ಇನ್ನಾವುದು ?

ನಿನ್ನೆ ಇಂದಿಗೆ ತೊಗಟೆ ಬಲಿಯಿತು,
ಬಣ್ಣ ಕೂಡಿತು ತಳಿರಿಗೆ,
ಮೂಡುತಿದೆ ಹೊಸ ತಳಿರು, ಇದಕೊ,
ಹೊಸತುಕಳೆ, ಇದೊ, ಮೊಳೆತಿದೆ,

ಎಂದು ಅನುದಿನ ಅವನು ನಲಿವನು.
ನೋಡು ಬಾ ಎಂದೆನ್ನನು
ಕರೆವನೊಯ್ಯನು, ತೋರಿ ನಗುವನು,
ಮರೆಯುವನು ತಾ ತನ್ನನು.

ತೊಗಟೆಯಲಿ ಕಳೆಮೂಡುವೆಡೆಯನು
ಬೆರಳ ಕೊನೆಯಲಿ ಮುಟ್ಟನು;
ಕುಡಿಗೆ ಗೆಣ್ಣನು ತೋರಬೇಕು,
ತೋರಬಾರದು ಬಿಟ್ಟನು.

ಮೂಡಿಬರುತಿಹ ಮೊಗ್ಗು ಬಾಳಿಗೆ
ಉಗುರ ಕೊನೆಯನು ತೋರುವ
ಪಾಪ ಸಮತೂಗುವುದು ಹಸುಳೆಯ
ಕಣ್ಣ ಚುಚ್ಚುವ ಘೋರವ.

ಹೆಣ್ಣ ಬಯಸಿದ ಮೂಕನನು ಗುರು
ತಂದೆತಾಯನು ಮಾಡಿದ
ಪರಿಯ ನೋಡಿದ ನಾನು ನಂಬುವೆ;
ನಂಬಲಾಗದು ನೋಡದೆ.

ಈ ಸಂಭ್ರಮದಲ್ಲಿ
ಹೆಣ್ಣ ಹಂಬಲನ್ನು
ಮರೆತ ಇವನನ್ನು
ನೋಡಿ ಗಾಢರು

ಆಕ್ಕಜದಿ ನಾನೊಮ್ಮೆ ಅವರನು,
ಗುರುವೆ ಅಚ್ಚರಿಯೇನಿದು?
ಹೊಟ್ಟೆನೋಯಲು ಕಣ್ಣಿಗಂಜನ!
ಅರಿಯಬಹುದೇ ನಾನಿದ,

ಗುರುವನ್ನು ಇದು ಹೇಗಾಯಿತು ಎಂದು ಕೇಳಿದರು.

ಎಂದು ಕೇಳಿದೆ. ಗುರುಗಳಂತೇ
ನನ್ನ ದಿಟ್ಟಿಸಿ ನೋಡುತ
ಸುಮ್ಮನಿದ್ದರು: ಇವನ ಯೋಗ್ಯತೆ
ಎಷ್ಟು ಎಂಬುದ ತೋಡುತ.

ಗುರು ವಿವರಿಸಿದರ

ಅರ್ಧಗಳಿಗೆಯ ಹೊತ್ತು ನನ್ನನು
ನೋಡಿ ಕೊನೆಯಲಿ ನುಡಿದರು.
ಅವರ ಸೊಲ್ಲಪರಂಜಿ ಕೆಡದೊಲು
ಹೇಳಬಲ್ಲೆವೆ ಮಡೆಯರು?

ಅರಿತನಿತ ನಾಬಲ್ಲತೆರದಲಿ
ಒಪ್ಪಿಸುವೆ ನಿಮ್ಮಡಿಯಲಿ.
ತಪ್ಪಿತೇ ನುಡಿ, ಎಲ್ಲಿಯೂ ಇಹ
ಗುರುವೆ ನನ್ನನು ತಡೆಯಲಿ.

## ಅವಧೂತರು

ಮೂರು ಲೋಕದಿ ತಂದೆ ಎಂಬುದು
ಒಂದೆ ತತ್ತ್ವ; ಅಂತೆಯೇ
ತಾಯಿ ತತ್ತ್ವವು ಒಂದೆ; ಇದರಲಿ
ಮೂರು ಲೋಕವು ನಿಂತಿವೆ.

ಮೂರು ಲೋಕಕ್ಕೆ
ಒಂದೇ ಒಂದು
ತಂದೆತಾಯಿ.

ಒಬ್ಬ ಬೀಜಪ್ರದ; ಕಳತ್ರವು
ಒಂದೆ; ಗಂಡಲಿ ಹೆಣ್ಣಲಿ
ನಡೆಯುತಿಹ ವ್ಯವಹಾರ ನಡೆದಿದೆ,
ಅದಕೊ, ಕೂರಿಗೆ ಮಣ್ಣಲಿ.

ಗಂಡುತಾನು ಗಂಡಲ್ಲ,
ಹೆಣ್ಣುತಾನು ಹೆಣ್ಣಲ್ಲ;

ಕೋಟಿಕೋಟಿಯ ಜೀವರಾಶಿಯ
ಎಲ್ಲ ಹೆಣ್ಣಲು; ಗಿಡ ಮರ
ಬಳ್ಳಿಗಳ ಹೂವಿನಲು; ಕೃಷಿಕರು
ಉತ್ತು ಬೀಜವ ನೆಡುವರೆ

ಜೀವಂತವಾದ
ಕೂರಿಗೆ ಪಾತಿ ಅಷ್ಟೇ.

ಹರಗಿದಂಗೈಯದಲನೆಲದಲಿ
ಇರುವ ಸಾವಿರ ಕುಳಿಯಲು;
ಗಾಳಿ ಹಾರಿಸಿ ತಂದ ಬಿತ್ತು
ಮೊಳೆತು ಮರವಹಬಳಿಯಲು;

## ಮೂಕನ ಮಕ್ಕಳು

ಚಿತ್ತ ಧರಿಸುತ ಬಾಳಹಡೆಯುವ
ಯಾವ ಒಂದಾ ಪಾತ್ರವೂ
ಏಕಮೇವನ ಅದ್ವಿತೀಯನ
ಏಕಮೇವ ಕಳತ್ರವು.

ಗಂಡು ಹೆಣ್ಗಳ ಒಡಲನೆನೆದು
ನಾಚಲಾಗದು ಇಂತೆನೆ.
ಬರಿಯ ತೋರಿಕೆ ಒಡಲು; ನಿಜವನು
ನಿಲುಕಲರಿಯದು ಚಿಂತನೆ.

ಈ ಮೂರ್ತಿಗೆ ನಾಚಬಾರದು. ತೋರಿಕೆಯನ್ನು ಮೀರಿ ನಿಜಕ್ಕೆ ಮನಸ್ಸುಕೊಟ್ಟರೆ ನಾಚಿಕೆ ಆಗುವುದೂ ಇಲ್ಲ.

ಕೂರಿಗೆಯ ಒಡಲೆಂದು ಚಿತ್ರಿಸಿ
ನಾಚಲೇತಕೆ? ಒಡಲಲಿ
ಲೋಹಮರಗಳ ಕೈದಲೂಹಿಸು;
ಸುಳ್ಳು ನಾಚಿಕೆ ಸಡಲಲಿ.

ಉರುಟಣೆಯೊಳಿನೆ ಆಡುತಿರುವರು
ಪ್ರಕೃತಿದೇವಿಯು ದೇವನು;
ದೇವ ಗಂಡನು ಎಸೆದು, ದೇವಿ
ಹೆಣ್ಣು ಎನ್ನುವ ಹೂವನು.

ಮರೆಯಲ್ಲಿರುವ ದೇವರೂ ಪ್ರಕೃತಿಯೂ ಆಡುವ ಉರುಟಣೆಯಲ್ಲಿ ಗಂಡು ಹೆಣ್ಣು ಫಲ ಪುಷ್ಪ.

ತಾನೆ ನಡೆಯುವ ಕೂರಿಗೆಯೆ ಸರಿ
ಗಂಡು : ಬಂಡಿಗೆ ಉಗಿಯನು
ತುಂಬಿ ನಡೆಸುವ ತೆರಕೆ ತುಂಬಿದೆ
ಇಲ್ಲಿ ಆಸೆಯ ಹೊಗೆಯನು.

ಉಗಿಯಿಂದ ರೈಲು ನಡೆವಂತೆ ಆಸೆಯಿಂದ ಗಂಡೆಂಬ ಕೂರಿಗೆ ನಡೆಯುತ್ತದೆ.

ಒಂದು ಬಾಳುವೆ ನಮ್ಮ ಎಲ್ಲಾ
ಬಾಳ್ಕೆಯನು ಬಾಳುತ್ತಿದೆ;
ಒಡಲ ಮರೆಯಿಸಿ ಆದಿಶೇಷ
ಹೊರಗೆ ಫಣಗಳನೆತ್ತಿದೆ.

ಅದನ್ನೆಲ್ಲ ನಡೆಸುತ್ತ ಒಂದು ಬಾಳುವೆ ಬಾಳುತ್ತಿದೆ.

ಬಿಲ ಬಿಲಕೆ ಹೆಡೆ ಬೇರೆ ಆಡಲು
ಹಾವು ಬೇರೆಯೆ ? ಬಾಹ್ಯಕೆ
ಜೀವ ಜೀವರು ಬೇರೆ. ಅರಿತೆಯೊ
ಇರುವುದೊಂದೇ ಜೀವಿಕೆ.

ಹುತ್ತದಲ್ಲಿರುವ ಒಂದು ಹಾವಿನ ನೂರು ಹೆಡೆ ನೂರು ಬಿಲದಲ್ಲಿ ಬೇರೆ ಬೇರೆ ಕಾಣುವಂತೆ,

ವಿಶ್ವಜೀವನ ಅದುವೆ, ಅದುವೇ
ಬ್ರಹ್ಮ, ಅದೆ ಪುರುಷೋತ್ತಮ.
ಇದನು ಸಂತತ ನೆನೆದು ಬಾಳುವ
ಮನುಜ, ಅವನೆ ಮಹಾತುಮ.

ನಮ್ಮ ದೇಹದಿ ನೋಡು : ನಡೆಯುವ
ಶಕ್ತಿ ನೆರೆದಿದೆ ಕಾಲಿಗೆ;
ಹಿಡಿಯುವುದು ಕೈ; ಕಣ್ಣು ನೋಡಿತು,
ರುಚಿಯನರಿವುದು ನಾಲಗೆ.

ದೇಹದಲ್ಲಿ ಕೈ ಕಾಲು
ಕಣ್ಣು ನಾಲಗೆ ತಾವು
ತಾವು ಅನುಭವ
ಪಡೆಯುವಂತೆ,

ನಾನು ನಡೆವೆನು ಎನಲು ಕಾಲು,
ಕಣ್ಣು ನಾ ನೋಡುವೆನೆನೆ,
ಹಿಡಿವೆ ನಾನೆನೆ ಹಸ್ತ, ನಾಲಗೆ
ನಾನೆ ರುಚಿಗಳ ಸವಿಯೆನೆ

ಎಂದು ಚಿಂತಿಸೆ, ಸತ್ಯವಪ್ಪುದೆ?
ಬ್ರಹ್ಮ ತತ್ತ್ವಕೆ ಮಾನವ
ಇಂತು ಅಂಗೋಪಾಂಗ; ಅರೆಕ್ಷಣ
ಅರಯಿಸೆ ಇದ ಕಾಣುವ.

ಮರೆಯು ಬ್ರಹ್ಮದ
ಕೋಟಿ ಹೆಡೆಯಾಗಿ
ಅಂಗೋಪಾಂಗವಾಗಿ
ಜೀವರಾಶಿ
ಜೀವಿಸುತ್ತಿವೆ.

ದೈವ ಬಾಳುತಲಿಹುದು, ತಾನು
ಬರಿಯ ಆಯುಧ, ಎಂದನೇ
ಹಸಿಯ ಸೌದೆಯ ಪರಿಯ ಮಾನವ
ಅಹನು ಹೊಗೆಯುದ ಇಂಧನ;

ಇದನ್ನು ತಿಳಿದವನು
ನಿರ್ಲಿಪ್ತನಾಗಿ
ಜೀವಿಸುತ್ತಾನೆ.
ಹೀಗಾಗುವುದು
ಬಾಳಿನ ಗುರಿ.

## ಮೂಳನ ಮಕ್ಕಳು

ರುಚಿಗೆ ಬಾಯನು ಚಪ್ಪರಿಸದೆಯೆ
ಆಗ ಬಾಳಲು ಬಲ್ಲನು;
ಹೊಲಬಿನಲಿ ಹರಿತರುವ ಸುಖಗಳ
ಬೆರಗಿಗಾತ್ಮವ ಚೆಲ್ಲನು.

ಇದ ವಿಚಾರದಿ ಕೆಲವರರಿವರು;
ಕೇಳಿ ತಿಳಿವರು ಕೆಲವರು;
ಹೊಗೆಯ ಅನುಭವ ಉಸಿರ ಕಟ್ಟಿ
ಮತ್ತೆ ಅನಿಬರು ತಿಳಿವರು;

ನಮ್ಮ ಮೂಳನ ರೀತಿ ಕೆಲವರು,
ಬಯಕೆಗಳು ಕೈ ಸಾರದೆ,
ಮುಂದುಗಾಣದೆ ನಿಂತು ನವೆವರು,
ಏನಗೆಯ್ಯಲು ತೋರದೆ.

ಉಳಿದವರ ಪರಿನೋಡಿ, ತನಗದು
ಇಲ್ಲವಾಯಿತು, ಎನ್ನದೆ
ಗುರಿಯ ನೋಡಲಿ ಇಂಥ ಮನುಜ:
ಒಬ್ಬ ಒಬ್ಬಗು ತನ್ನದೆ

ಗುರಿಮುಟ್ಟುವುದಕ್ಕೆ
ಒಬ್ಬೊಬ್ಬರಿಗೆ
ಒಂದೊಂದು ದಾರಿ.

ದಾರಿ ಇಹುದನು ಅವನು ಅರಿವನು;
ಅದ ಹಿಡಿದು ತನ್ನಿಕ್ಕೆಗೆ
ಸೇರುವನು. ಗತಿ ಬೇರೆ ಇಲ್ಲವೆ
ಮಿಗಕೆ ಹಾವಿಗೆ ಹಕ್ಕಿಗೆ?

ಮಲೆಯ ಮೇಗಡೆ ಇಹುದು ದೇಗುಲ:
ಗಾಡಿಯಿರೆ, ಕುಳಿತದರಲಿ,
ಸಾರು ಮಾರ್ಗದಿ; ಗಾಡಿ ಇಲ್ಲವೆ,
ನೋಡು ಮೆಟ್ಟಲು ಇದಿರಲಿ.

ಕೆಲವರಿಗೆ ಸೌಕರ್ಯ ಇರುತ್ತದೆ; ಕೆಲವ· ಇಲ್ಲ.

ತಂದೆಯನು ಪಡೆದಿರುವ ಬಾಲಕ
ಅವನ ಭುಜದಲಿ ಕೂಡಲಿ;
ತಂದೆ ಇಲ್ಲದ ಹುಡುಗ ತಾನೇ
ಏರಲಾಗದೆ ನೋಡಲಿ.

ಮಧ್ಯಮಾರ್ಗದಿ ಸಾರಬಾರದ
ಬಡವ, ಅಂಚಲಿ ಮುಂದರಿ;
ನಿನ್ನ ಮುಟ್ಟದು ಮಾರ್ಗ ಮಧ್ಯದ
ನೂಕು ನುಗ್ಗಲು ಸಂದಡಿ.

ಸೌಕರ್ಯದ ಜೊತೆಗೆ ಆದರಿಂದಲೇ ತೊಂದರೆಯೂ ಇರಬಹುದು.

ಇದೆಲ್ಲ ಅಪ್ರಕೃತ

ಬಾಳಹಾಸಂಗಿಯಲಿ ಈ ಕಡೆ
   ಕಾಯು ತಡೆದಿಹ ಮಾತನು
ನೆನೆದು ನಿಲುವೆಯ ? ನಡೆಸು ಆ ಕಡೆ:
   ವಂಚಿಸಂತು ವಿಧಾತನ.

ವಿಧಿ ವಂಚಿಸಿದರೆ ನೀನು ವಿಧಿಯನ್ನು ಪ್ರತಿಯಾಗಿ ವಂಚಿಸಬೇಕು.

ಆಸೆಯನು ಗೆಲಬೇಕು ಮನುಜ:
   ಅನುಭವಿಸಿಯೇ ಗೆಲುವುದೋ
ಅನುಭವಿಸದೆಯೊ ? ಇದರೊಳೇನಿದೆ ?
   ಎಂತು ಗೆಲಿದರು ಸಲುವುದು.

ಹೇಗೆ ? ಆಸೆಯನ್ನು ಅನುಭವಿಸುವಂತಿಲ್ಲ ; ತಪ್ಪಿಸಿಕೊ ; ಗುರಿಗೆ ನಡೆ.

ನೀನು ನಿಂತೆಡೆಯಿಂದ ಮುಂದಕೆ
   ಹೋಹುದೆಂತು ? ತಿಳಿ ಇದ.
ಇದನು ಮಾಡಲಿ ಎಂದೆ ದೇವರು
   ನಿನ್ನ ಆಯೆಡೆ ನಿಲಿಸಿದ.

ಗಂಡು ಹೆಣ್ಣನು ಬಯಸಿತೇತಕೆ ?
   ಬಾಳಬೇಡಿಕೆಯಾವುದು ?
ನಿತ್ಯವಾಗಲಿ ಜೀವ ಎಂಬುದು :
   ಇದಕೆ ಗಿಡ ಮರ ಹೂವುದು.

ಗುರಿಯೇನು ? ಗಂಡು ಹೆಣ್ಣನ್ನು ಬಯಸಿತೇಕೆ ?

## ಮೂಕನ ಮಕ್ಕಳು

ತನ್ನ ಮೂಲಕ ವಿಶ್ವಜೀವನ
ನಿತ್ಯವಾಗಲಿ ಎಂಬುದೇ
ಪ್ರಣಯದೊಳಗಣ ಮರ್ಮ. ಮಕ್ಕಳು
ಇಲ್ಲ : ಬಾಳ್ಕೆಯೆ ತುಂಬದು.

ಎಳೆಯ ಜೀವವನ್ನು
ಹಡೆಯಬೇಕು ಎಂದು.

ಮಗುವ ಹಡೆ, ಹೊರೆ, ಬೆಳೆಸು, ಎಂದು
ಪ್ರಕೃತಿ ನಮ್ಮನು ಹೂಡಿದೆ;
ಹಡೆದು ಹೊರೆಯುತ ಬೆಳಸುತಿರುವೆವು
ಏಕೆ ಎಂಬುದ ನೋಡದೆ.

ತನ್ನಿಂದ ಬಾಳು
ನಿತ್ಯವಾಗಲಿ
ಎನ್ನುವದಕ್ಕಾಗಿ;
ಇದರಿಂದ ಬರುವ
ಸಂಸ್ಕಾರಕ್ಕಾಗಿ.

ಹಡೆಯಲೇಬೇಕೆಂಬುದಿಲ್ಲ
ಹೊರೆದು ಬಹ ಪರಿಪಾಕಕೆ:
ಯಾರೆ ಹಡೆಯಲಿ, ಸಲಹು ನೀನು:
ಪೋಪೆ ನೀನದೆ ಲೋಕಕೆ.

ಮಕ್ಕಳನ್ನು ಹಡೆದು
ಹೊರೆಯುವುದು
ವಾಡಿಕೆ. ಆದರೆ
ಹೊರೆಯುವುದೇ
ಮುಖ್ಯ.

ಹೊರೆಯೆ ಮಾನವ ಶಿಶುವೆ ಬೇಕು
ಎಂದು ಎಣಿಸಲು ಸಲ್ಲದು;
ಮಗುವಿನಂತೆಯೆ ಹಕ್ಕಿಮಿಗಸೊಸಿ
ಹೊರೆವ ಕೈಯನು ಬಲ್ಲದು.

ಆ ಹೊರೆಯುವ ಎಳ
ಜೀವ ಮಾನವವೇ
ಆಗಬೇಕೆಂದಿಲ್ಲ.

ಎಳೆ ಉಸಿರು ಯಾವುದನೆ ಆಗಲಿ
ಹೊರೆಯೆ ಮನ ಮೆದುವಪ್ಪುದು;
ಸ್ವಾರ್ಥದಲಿ ಪಾಷಾಣವಾಗಿಹ
ಹೃದಯ ಅರಳದೆ ತಪ್ಪದು.

ತನ್ನ ಸುಖವನು ಮರೆತು, ಇದಿರಿನ
ಸುಖವ ಬಯಸಲು ಮುಕ್ತಿಯ
ಮೊದಲನೆಯ ಸೋಪಾನ: ಅದುವೇ
ಮುಂದೆ ತಹುದು ವಿರಕ್ತಿಯ.

ಸ್ವಾರ್ಥ ಹೋಗಬೇಕು; ಪರಾರ್ಥ ಸಿದ್ಧಿಸಬೇಕು.

ಹಡೆದು ಬಹ ಸಂಸ್ಕಾರವನು ಈ
ಹೊರೆದ ಬಾಳುವೆ ಪಡೆವುದು;
ಅಟ್ಟು ಉಂಡರೆ ತಣಿವ ತೆರನೇ
ಅಡದೆ ಉಂಡರು ನಡೆವುದು.

ಅಟ್ಟು ಉಂಡರೇನು, ಅಡದೆ ಉಂಡರೇನ?

ಮೊದಲ ಪಾಠವ ಬಿಟ್ಟು ಬಾಲಕ
ಎರಡನೆಯದನು ಕಲಿತನೆ?
ಷ್ಟವಾಯಿತು ಕಲಿವು: ಆದರೆ
ಮೊದಲ ಕಲಿಯದೆ ಉಳಿದನೆ?

ಮೊದಲ ಪುಸ್ತಕ ಕಲಿತು ಎರಡನೆಯದನ್ನು ಕಲಿತರೇನು? ಹಾಗೆಯೇ ಎರಡನೆಯದನ್ನು ಕಲಿತರೇನು?

ಮೊದಲ ಪಾಠವ ಕಲಿತನೆಲ್ಲಿ ?
ಈ ಹವಣ ಜನ ಕಾಣದು :
ಎರಡನೆಯುದನು ಕಲಿಯೆ ಮೊದಲದು
ಜೊತೆಗೆ ಬಾರದೆ ಮಾಣದು.

ಸೂತ್ರವನೆ ಅಭ್ಯಾಸ ಮಾಡಿದ
ಶಾಸ್ತ್ರಿಗಳು ಲಘು ಕೌಮುದಿ
ಬರದೆಹೋಯಿತು ಎಂಬರೇ ? ಲಘು
ಅಡಗಿ ನಿಂತಿದೆ ಭೂಮದಿ.

ದೊಡ್ಡ ಗ್ರಂಥವನ್ನು
ಕಲಿತವನು ಅದರ
ಸಂಗ್ರಹ ಬರಲಿಲ್ಲ
ವೆನ್ನಬೇಕೆ ?

ಮೊದಲು ಹೂವುದು ಆಚೆ ಕಾವುದು
ಮರದ ಜಾತಿಗೆ ವಾಡಿಕೆ ;
ಹೂವ ತೋರದೆ ಅತ್ತಿ ಕಾವುದು
ಯಾವ ಮಾಯೆಯ ಕಾಡಿಗೆ ?

ಹೂವುದು ಕಾವುದ
ಕ್ಕಾಗಿ ; ಹೂವದೆ
ಕಾತರೆ ತಪ್ಪೇನು ?

ಹೂವತೋರದು ಅಷ್ಟೆ : ಹೂವಿನ
ಕಂಪ ತಳೆಯದೆ ಸಾಗದು.
ಹೊರೆವ ಪುಣ್ಯವ ಗಳಿಸು ; ಹಡೆಯದ
ಕುಂದು ನಿನ್ನನು ತಾಗದು

ಹಡೆಯುದೆ ಹೊರೆಯು
ವುದು ಇದರಂತೆ.

ಹಡೆವ ಅಧಿಕೃತಿ ಕಿರಿದು, ಒಡಲದು;
ಹೊರೆವುದಾತ್ಮನ ಅಧಿಕೃತಿ;
ಕಿರಿದು ಇಲ್ಲದೆಹೋಯ್ತೆ? ಬೇಡ,
ಹಿರಿದು ಇರಲೆನೆ ಅದು ಮತಿ.

ಹೊಲನ ಬಿತ್ತಲು ಮರನ ಕೂರಿಗೆ;
ಮಿಗದ ಜಾತಿಗೆ ಗಂಡದು:
ಮನುಜ ಇಷ್ಟಕೆ ಮುಗಿದರಾಗದು;
ಏನು ಮುಂದಕೆ ಕಂಡುದು?

ಹೆಣ್ಣ ಜೊತೆಯಲಿ ನಿಂತು ತಾಯೂ
ಆಗಿ ಎಳೆಯದ ಕಾಯುವ
ನಿಟ್ಟು ಮನುಜಗೆ. ಇದನು ಮರೆತನು
ಬಾಳ್ವ ಹೊತ್ತಲೆ ಸಾಯುವ.

ಮನುಜಜಾತಿಯಲ್ಲಿ
ತಂದೆಯಾದದ್ದು
ತಾಯೂ ಆಗಬೇಕು.

ತಂದೆ ಯುಚ್ಚುಗದೊಡನೆ ತಾಯ
ಎಳಮನಸು ಅಳವಟ್ಟುದೇ
ಮೃತ್ಯು ತಹ ಪಾಶದಲಿ ಅವನನೆ
ಅಂದೆ ನೀನೇ ಕಟ್ಟದೆ.

ಆಗ್ಗ ಮನುಷ್ಯನು
ಅಮರನಾಗುತ್ತಾನೆ.

ಮೂಕನ ಮಕ್ಕಳು

ಮದುವೆಯಾಗೆನು ನಾನು; ಮದುವೆಯ
ಸೌಖ್ಯ ತಪ್ಪಿತು ಎಂಬೆನೆ?
ಒಡಲ ಮಿಕ್ಕುದನುಂಡು, ಮೂಕಗೆ
ತೋರಿದೆನು ಅದೆ ಇಂಬನೆ.

ಅವಧೂತರು ಮದುವೆಯಾಗಲಿಲ್ಲ ಆದರೆ ಗುರು ಕೃಪೆಯಿಂದ ಒಡಲ ಸುಖಕ್ಕಿಂತ ಹಿರಿದಾದ ಸುಖವನ್ನು ಕಂಡರು.

ಗುರುಗಳಡಿ ಹಿಡಿದೆನು: ಅನುಗ್ರಹ
ಮಾಡಿ ಉಳಿಸಿದರೆನ್ನನು.
ಗುರು ಅನುಗ್ರಹಿಸಿದರೆ ಇವನೂ
ಕಾದುಕೊಂಬನು ತನ್ನನು.

ಮೂಕನೂ ಹೀಗೆಯೇ ಉಜ್ಜೀವಿಸುವನು.

ಗೌಡರು

ಎಂದರವಧೂತರು. ಮಹಾತ್ಮರ
ಮಾತ ಗಿಳಿಯವೊಲೋದಿ ನಾ,
ಒಡೆಯರೆದುರಲಿ ಗುರುವನೆನೆಯುತ,
ಧನ್ಯನಾದೆನು ಈ ದಿನ.

ಎಂದು ಗುರುವಿನ ಮಾತನ್ನು ಹೇಳಿ ಗೌಡರು ಗುರುವನ್ನು ನೆನೆದರು.

ಕತೆಗಾರ

ಇಂತು ನುಡಿದುದೆ ಜವರಗೌಡರು
ನೆನೆದು ಕುಳಿತರು ಅರೆಕ್ಷಣ;
ಮನಕೆ ಗುರುವನು ಬಿಜಯಗೆಯಿಸಿ
ಪಡೆದರಹುದಾ ದರುಶನ.

### ಮೂಕನೆ ಮಕ್ಕಳು

ಅಂತು ಸುಮ್ಮನೆ ಕುಳಿತು ಅರೆಕ್ಷಣ
·ಮತ್ತೆ ಗೌಡರು ನುಡಿದರು;
ಧ್ಯಾನದಲಿ ನಿಲಿಸಿದ್ದ ತಮ್ಮ
ಕತೆಯ ಸೂತ್ರವ ಹಿಡಿದರು.

ಕ್ಷಣಬಿಟ್ಟು
ಕತೆಯನ್ನು
ಮುಂದರಿಸಿದರು.

### ಗೌಡರು

ಹುರುಳು ಕಾಣದೆ ನಾನು ಗುರುವನು
ಬೆಳ್ಳನೆಯ ಬರಿಮಾತಿಗೆ
ಹಿರಿಯರೆಂಬವನಲ್ಲ: ಅವರದು
ನಿಷ್ಠೆಯರಿತವಧೂತಿಕೆ.

ಆರು ತಿಂಗಳು ನಮ್ಮೊಳಿದ್ದು
ಅವರು ಮುಂದಕೆ ನಡೆದರು;
ಬಿಟ್ಟು ಬಾಳೆವು ಜೊತೆಗೆ ಬಹೆವೆನೆ
ಒಂದು ಮಾತಲಿ ತಡೆದರು.

ಆರು ತಿಂಗಳಮೇಲೆ
ಗುರುಗಳು ಎತ್ತಲೋ
ಹೊರಟರು.

“ಜೊತೆಗೆ ಬರುವುದು ಉಂಟೆ, ಅಣ್ಣ?
ನಿಜದಿ ಬಯಸುವೆಯಪ್ಪರೆ,
ಜೊತೆಯೊಳಿರುವುದ ಕಲಿ; ಕಳೇಬರ
ಉಡಿದರೂ ಜೊತೆ ತಪ್ಪದು.

“ಒಡಲು ಒಡಲನು ನೋಡಿ ಜೊತೆಯಲಿ
ನಡೆಯುವುದು ಲಘು ಕೌಮುದಿ;
ಮನವ ಜೊತೆಯಲಿ ನಿಲಿಸು; ಸೂತ್ರದ
ಪಾಠವಪ್ಪುದು ನೇಮದಿ.”

ಮತ್ತೆ ಅವರನು ಕಾಂಬ ಪುಣ್ಯ
ಇಲ್ಲವಾಯ್ತೀ ಜನ್ಮಕೆ;
ಆದರವರಾ ನಡೆಯ ಸತ್ವ
ಅಂದೆ ಊರಿತು ಮರ್ಮಕೆ

ಮರಳಿ ಬರಲಿಲ್ಲ.

ನುಡಿವನಿತ ನಡೆವುದಕೆ ಬಾರದು
ನಿಮ್ಮ ಸೇವಕ ಜವರಗೆ;
ನುಡಿಗೆ ನಿಲುಕದ ನಡೆಯ ಚೆಲುವಿಕೆ
ಸಿದ್ಧಿಸಿದ್ದಿತು ಅವರಿಗೆ.

ಎಂತ ಹಿರಿಯ
ಚೇತನ ಅವರದು !

ಎಷ್ಟು ಭವದಲಿ ಯಾವ ತೆರದಲಿ
ಎನಿತು ಏನನು ನೋತರೆ
ದೊರೆವುದೋ ಆ ಸಿದ್ಧಿ! ಇಲ್ಲದೆ
ಸುಮ್ಮನೆಯೆ ಅವಧೂತರೆ?

## ಮೂಕನ ಮಕ್ಕಳು

ಹೋಹ ಮೊದಲಲಿ ಗುರು ಅದೆಲ್ಲಾ
ಮಂದಿಯಲಿ ನಗೆ ನುಡಿದರು ;
ಮನದ ವ್ಯಾಕುಲ ಏನೆ ಇದ್ದರು
ಕೊಡವಿ ಎಲ್ಲವ ತೊಡೆದರು ;

ಹೋಗುವ ಮೊದಲು ಗುರು ಮೂಕನಿಗೆ

ನಮ್ಮ ಮೂಕನ ಬಳಿಗೆ ಕರೆದರು ;
ಸನ್ನಿವಾತಲಿ, ಮರವನು
ರಕ್ಷಿಸಿಕೊ, ಜೋಪಾನ, ಇಂತೇ
ಮೆಚ್ಚಿಸುವೆ ನೀ ಗುರುವನು,

ಮರಗಳನ್ನು ಜೋಪಾನವಾಗಿ ಸಾಕು, ಬದುಕಿ ಕೊಳ್ಳುತ್ತೀಯೆ, ಎಂದು ಶಾಸನ ಮಾಡಿದರು.

ಮೆಚ್ಚಿಸುವೆ ದೇವರನು, ಹೆಣ್ಣಿಗೆ
ಮರುಳು ಹೋಗದ ಕಾಯದೆ
ಹೆಣ್ಣು ನೀಡದ ಸುಖವ ಬೆಳೆಯುವೆ,
ನಿನಗೆ ಪಥ, ತಮ್ಮಾ, ಇದೇ,

ಎಂದು ಒಮ್ಮೆಗೆ ಇಮ್ಮೆ ವಿವರಿಸಿ
ಬೀಳುಕೊಟ್ಟರು ಮೂಕನ.
ಎನಿತ ತಿಳಿದನೊ, ಅವನು ತಲೆಗೆ
ಗುರುಗಳಡಿಗಳ ಸೋಕಿನ

ಮೂಕ ಒಪ್ಪಿದ.

ಸುಖವನಿತ್ತನು—ಯಾವ ಹೆಣ್ಣಿನ
ಸೋಕು ಆ ಸುಖ ಈವುದು?
ಗುರುವಿನಡಿ ಸುಖವೀವುದಲ್ಲದೆ
ಜನ್ಮಜನ್ಮಕು ಕಾವುದು.

ಅವರಿಗೆ ಮೊಕ್ಕಿದ.

ಕರಣ ಮನಗಳ ಕೆದರಿ ನಲಿಸುವ
ಸೌಖ್ಯವಿದೆ ಸಂಸಾರದೆ;
ಅವರ ಜೋಡಿಸಿ ನಿಲಿಸಿ ತಣಿಸುವ
ಗುರುವಿನಡಿ ಅದ ಮೀರಿದೆ.

ಅದಕ್ಕಿಂತ ಹೆಚ್ಚಿನ
ಸುಖ ಉಂಟೆ?

ಕ್ಷೋಭೆಗೊಳಿಸುತ ಸುಖವನೀಡುವ
ಲೋಕ ಉಳ್ಳಿಯ ಕಂಪನು
ಹೋಲುವುದು; ಹೋಲುವನು ಗುರು ನೊರೆ
ಹಾಲ ಗಮಗಮದಿಂಪನು.

ಊಟ ಔಷಧ ಒಂದೆ ಅಪ್ಪುದು
ಗುರುವ ಮೆಚ್ಚಿದ ಜೀವಗೆ;
ಎಲ್ಲ ಸುಖದುಗ್ರಾಣ ಅವನಿಗೆ
ಅವರು ಮೆಟ್ಟಿದ ಹಾವುಗೆ.

ಗುರುಗಳಿಲ್ಲಿಯೊ ಹೊರಟುಹೋಹರು, ಗುರು ಹೊರಟು ಹೋಗುವರೆಂದು ತಿಳಿದು ಗೋಳುಗರೆದ.
  ಮರಳಿ ಬಾರರು, ಎಂಬುದು
ಮೊದಲು ಮೂಕನ ಮನಕೆ ಮುಟ್ಟಿದು;
  ಮುಟ್ಟಿದೊಡನೆಯೆ, ತುಂಬಿದ

ಜನದ ಮಧ್ಯದಿ ಕೂಗಿಕೊಂಡನು,
  ತಾಯನಗಲುವ ಬಾಲನೋ,
ಗಂಡನಗಲುವ ಹೊಸಬಿಯೋ, ಎನೆ
  ಹಿರಿವ ಬೇನೆಯ ತಾಳನು ;

ಸಾಯಲಾರದೆ ಹಂದಿ ಊಳುವ
  ತೆರನ ಮೂಕಸ್ವರದಲಿ
ಗೋಳುಗರೆದನು ; ನೋಡುವರ ಮನ
  ಕರಗಿ ಹರಿಯುವ ಭರದಲಿ.

ಗುರುಗಳೈದಿದಮೇಲೆ ಮೂಕನ ಅವರು ಹೊರಟು ಹೋದಮೇಲೆ ಇಮ್ಮಡಿಯಾದ ಶ್ರದ್ಧೆಯಿಂದ ಮರವನ್ನು ಕಾದು ಸಲಹಿದ.
  ಶ್ರದ್ಧೆ ಇಮ್ಮಡಿಯಾಯಿತು ;
ಮನಕೆ ಮನವೇ ಮಾರುಹೋಗಿರೆ
  ಅವನು ಮರ ಇವ ಕಾಯುತ

## ಮೂಕನ ಮಕ್ಕಳು

ತಾನೆ ಮರ ಮರ ತಾನೆ ಎಂಬೊಲು
ಇವನು ಬೆಳಸುತ ಬೆಳೆದನು ;
ಮಕ್ಕಳನು ಹಡೆದವರು ತಳೆಯುವ
ತೃಪ್ತಿದೃಷ್ಟಿಯ ತಳೆದನು.

ಮದುವೆಯಾದವರೆಲ್ಲ ಪಡೆಯುವ
ಸುಖದ ಪದವಿ ಅದಾವುದು ?
ಕನಸ ರತಿ ನಿಜಗತಿಗೆ ಅಂತರ
ಒಂದು ನೂರೇ ಗಾವುದ.

ಮಕ್ಕಳಾದವರೆಲ್ಲ ಪಡೆಯುವ
ತಣಿವು ಎಂಥದು ಕಾಣೆವೆ ?
ಒಳಿತು ಬೆಳೆದವೆ ಒಳಿತು ; ಇಲ್ಲವೆ
'ಹೋಗೆ ಏತಕೆ ಪ್ರಾಣವೇ ?'

ಗಾಸಿಗೊಳಿಸುವ ಹೆಂಡರಿಲ್ಲದೆ,
ಎಂತೊ ಎನಿಸದ ಮಕ್ಕಳ
ಪಡೆದು, ತೃಪ್ತಿಯ ನೆಲೆಯಹೋದುದು
ನಮ್ಮ ಮೂಕನ ಹೆಕ್ಕಳ.

ತರುಣಗಡಸಿದ ಹೆಣ್ಣ ಹಂಬಲ
ಮಧ್ಯಪ್ರಾಯದಿ ತೊಲಗಿತು;
ಗುರುವನುಗ್ರಹವಿತ್ತ ಮಕ್ಕಳ
ಸೇವೆ ತಣಿವಲಿ ಪಳಗಿತು.

*ಅಂದು ಹೆಣ್ಣನ್ನು*
*ಬಯಸಿದ ಇವನು*
*ಪ್ರಾಯದಲ್ಲಿ*
*ಆ ಬಯಕೆಯನ್ನು*
*ತಪ್ಪಿಸಿಕೊಂಡ.*

ಯಾರೆ, ಆಟಕೆ, ಮದುವೆ ಅಹೆಯಾ
ಎನಲು ಇವನನು ಆಚೆಗೆ,
ಮಕ್ಕಳಿಗೆ ಮಲತಾಯ ತರಲಾ
ಏನು ಎಂತಹ ನಾಚಿಗೆ?

ಎಂದು ಕೈಯಲಿ ಕಣ್ಣು ಹುಬ್ಬಲಿ
ಸನ್ನೆಗೆಯ್ವನು. ಗೊಂಬೆಯೇ
ದೇವರಾಯಿತು; ಅಂತು ನಿಚ್ಚಳ,
ಅವನ ಮನಸಿನ ನಂಬಿಕೆ.

ಹತ್ತಿರಕೆ ಮೂವತ್ತು ವರುಷದ
ದಿವಸ ಮರಗಳ ಬೆಳೆಸುತ
ಮೆಯ್ಯನುಳಿದನು ಮೂಕ, ನೆಲದಲಿ
ತನ್ನ ಹೆಸರನು ನಿಲಿಸುತ.

*ಮೂವತ್ತು ವರುಷ*
*ಈ ಮರಗಳನ್ನು ಸಾಕಿ*

**ಮೂಕನ ಮಕ್ಕಳು**

ಇರುವ ದಿನ ಈ ಮರಗಳಡಿಯಲಿ
  ಜಗಲಿಯೊಂದನು ಕಟ್ಟಿದ;
ಏಸೊ ಜನ ನೆರಳಿನಲಿ ಆಡಿ
  ನಿಂತು ಕೂತುದು ಪಟ್ಟಿದ

ಅವುಗಳಡಿ ಒಂದು ಜಗಲಿ ಕಟ್ಟಿ

ನೋಡಿ, ಎನಿತೋ ಸುಖವನಾಂತು,
  ಮನೆಯನಾಳ್ವ ಗೃಹಸ್ಥರ
ಪದವನನುಭವಿಸಿದನು; ಇಂತಿದು
  ಅವನ ಚರಿತೆಯ ವಿಸ್ತರ.

ಆ ನೆರಳಲ್ಲಿ ಜನ ನಲಿದದ್ದನ್ನು ನೋಡಿ ತೃಪ್ತನಾದ.

**ಕತೆಗಾರ**

ಮಾತ ಮುಗಿಸಿದ ಗೌಡರಿಗೆ ನಾ
  ವಂದನೆಯ ನುಡಿ ಹೇಳಿದೆ;
"ಗೌಡರೇ ಈ ಕತೆಗೆ ನನ್ನೆದೆ
  ತುಂಬು ಸಂತಸ ತಾಳಿದೆ.

"ಎಂಥ ಹಿರಿಯರು ನಿಮ್ಮ ಗುರುಗಳು!
  ನಿಮ್ಮ ನುಡಿ ಈ ತೂಕಕೆ
ಎಂತುಬಂದಿತು, ಬಂದಿತೆಂತು
  ಮನಸು ಈ ಪರಿಪಾಕಕೆ,

ಕತೆಗಾರನು ಗೌಡರನ್ನು ಮೆಚ್ಚಿ ವಂದಿಸಿದನು.

“ ಎಂದು ಅಂದೇ ಚಿಂತಿಸುತ್ತಲಿ
ಅರ್ಥಹರಿಯದೆ ಬಿಟ್ಟೆನು ;
ಗುರುಗಳೀ ಕತೆ ಕೇಳಿ ಅರಿತೆನು
ನಿಮ್ಮ ತಿಳಿವಿನ ಹುಟ್ಟನು.

“ ಅವರ ಆ ಹಿರಿ ನಡೆಯ ಚೆಲುವಿಕೆ
ಮಾತಮಿಕ್ಕಿತು ಎಂಬಿರೇ
ಅಂತೆ ನಿಮ್ಮಾ ನಡೆಯು ನುಡಿಯು
ನನ್ನ ತಣಿಸಿವೆ ನಂಬಿರಿ.”

ನುಡಿದೆ ಮನವನೆ: ಮೊದಲ ದಿವಸದ
ಇವರ ಪರಿವೆಯ ನೋಡುತ
ಆಯಿತೆಂತಿದು ಎಂಬ ಯೋಚನೆ
ನನ್ನ ಊಹೆಯ ಕಾಡಿತು.

ಜವರಗೌಡರು ವಿನಯನುಡಿದರು :
“ ಏನಿಹುದು, ಅದು ಗುರುವಿನ
ಕರುಣೆ ಬೆಳಸಿದ ಪೈರು, ಉಳಿದುದು
ಹೊಗಳಿತೆನ್ನಯ ಮರೆವನು.

ಗೌಡರು ವಿನಯ. ನುಡಿದು ಮತ್ತೆ ಅತ್ತ ಬಂದಾಗ ಆ ಮರಗಳನ್ನ ನೊ ಎಂದರು.

“ಗಾಳಿಹನುಮನಗಿರಿಯ ಮುಂಗಡೆ
ಮತ್ತೆ ಸುಳಿಯುವ ಹೊತ್ತಲಿ,
ನೋಡಿ, ಒಡೆಯರು, ನಮ್ಮ ಮೂಕನ
ಮಕ್ಕಳನು : ಈ ಸುತ್ತಲಿ

“ಬೇರೆಯಾವುದೆ ಮರವು ಇಂತು
ಮೆಚ್ಚಿ ಸೊಗಸವು ನೋಟಕೆ;
ನಿಲುವ ಚೆಲುವಿಕೆ ಒಪ್ಪಲಪ್ಪುದು
ದೇವಲೋಕದ ತೋಟಕೆ.

“ಮುಗನ ಹೆಸರಿನ ಮಲೆಯಹಾಯುತ
ಗಾಳಿಹರಿತರೆ ತಿಟ್ಟಿಗೆ,
ಅದರೊಳಾಡುವ ಮರನ ಸಪ್ಪುಳು
ಕೇಳುವರೆ ಬಹು ನೆಟ್ಟಗೆ.”

“ನಾಳೆಯೇ ನಾ ಮರಳಿ ಗಿರಿಯೆಡೆ
ನಡೆಯಹೋಹೆನು, ಗೌಡರೆ;
ಮೂಕನನು ಗುರುಗಳನು ನೆನೆಸುವ
ನಿಮ್ಮ ಮರವನು ನೋಡದೆ

ಕತೆಗಾರನು ಆಗಲಿ
ಎಂದು ನಿಂತರು.

ತಪ್ಪೆನೆನ್ನುತ ನಾನು ನಿಂತೆನು.
ಜವರಗೌಡರು ನಿಲ್ಲುತ,
ಹೋಗಿಬನ್ನಿರಿ, ಒಡೆಯ, ನಿಮಗೆ
ದೇವರೆಂದೂ ಒಳ್ಳಿತ

ಪರಸ್ಪರ ಬೀಳ್ಕೊಳುವೆಯಾಯಿತು.

ನೀಡಿ ಸಲಹಲಿ, ಎಂದು ನುಡಿಯುತ
ನಗು ನಗುತ ಕೈಮುಗಿದರು.
ಏನು ಚೆಲುವಾ ನಿಲುವು, ಆ ನಗೆ!
ಸಾಲದೆನಿತದ ಬಗೆದರೂ.

ಮನೆಗೆ ಬಂದವನಿದನು ಗೃಹಿಣಿಗೆ
ಹೇಳಿದೆನು ಮೆಚ್ಚಾಡುತ;
ಹೆಣ್ಣು ಒಪ್ಪದು ಇಂತ ಮಾತಿಗೆ;
ಅವರ ನುಡಿ ಹುಚ್ಚೋಡಿತು.

ಕತೆಗಾರನು ಮನೆಗೆ ಬಂದು ಮೂಕನ ಸಂಗತಿಯನ್ನು ಗೃಹಿಣಿಗೆ ಹೇಳಿದನು.

“ಹಾಲ ಬೇಡಿತು ಕೂಸು; ಆ ಗುರು
ಹಾಲು ಇಲ್ಲದ ಪಾಡಿಗೆ
ಕಚ್ಚು ಕುಡಿಸಿದ. ಏನು ಚದುರಿದು?
ಬಯಲಿಗೇ ಮನೆ ಬಾಡಿಗೆ!

ಹಾಲು ಬೇಡಿದ ಕೂಸಿಗೆ ಕಲಗಚ್ಚು ಕೊಟ್ಟರು ಗುರು;

## ಮೂಕನ ಮಕ್ಕಳು

“ ಮೂಕ ಬಯಸಲು ಮೂಕಿಯೊಬ್ಬಳ
ತಂದು ಕೊಟ್ಟರಲಾಗದೆ?
ಆರು ತಿಂಗಳ ದಿವಸ ಬಾಳಲು
ಸಾಕು. ಬಾಳುವೆ ಸಾಗದೆ

“ ಹಿರಿದರೂ ಒಳಿತಾಯಿತೆಂಬೆನು.
ಬದುಕು ಮಕ್ಕಳ ಆಟವೆ?
ಗೊಂಬೆಯನು ಮಗುವೆಂದು ನಂಬಿಸಿ
ಹೊರೆಯಿಸುವ ಬರಿ ಮಾಟವೆ?

“ ಪಾಪಿ ನಾಲಗೆ ಕಿವಿಗಳಿಲ್ಲದ
ನಡೆವ ಮರನನು ಹೆತ್ತರೆ,
ನಡೆಯದುದನವನಿಂದ ಹಡೆಯಿಸಿ
ನೀವಿದನು ಹೊಗಳುತ್ತಿರಿ.”

ನಡೆಯುವ ಮರ
ವಾಗಿದ್ದ ಮೂಕ,
ನಡೆಯದ ಮರ
ಅವನ ಮಕ್ಕಳು;
ಎಂದರು ಆಕೆ.

ಅಂದಿನಂದದಿ ಮಗಳು ಅಳಿಯ
ಮನೆಯಲಿದ್ದರೆ ಏನನು
ಹೇಳುತಿದ್ದರೊ? ಈಗ ನಾನು
ಸವಿದೆನೀ ಕಹಿ ಜೇನನು.

## ಮೂಕನ ಮಕ್ಕಳು

ಮೂಕ ಎಲ್ಲರ ಬಾಳಬಾಳನು
ಎಂಬುದನು ನಾನರಿಯೆನೆ?
ಕೆಟ್ಟತೋಹದ, ಎಂದ ಬಾಳುವೆ
ಕೆಡದೆ ಉಳಿದಾ ಪರಿಯನೆ

ಕತೆಗಾರನು ಈ ಪಕ್ಷ
ವನ್ನು ಬಲ್ಲನು.

ನೋಡುವೆನು ನಾನಿಲ್ಲಿ. ಬಾಳಲಿ
ಎಲ್ಲ ರೀತಿಯ ಜನವಿದೆ:
ಯಾವನೂ ಪಥಗೆಡದೆ ಬಾಳುವ
ದಾರಿ ತೋರಿಸಿ; ಘನ ಅದೆ.

ಮೂಕನ ಆಸೆ ತುಂಬ
ಲಿಲ್ಲ ನಿಜ. ಆದರೆ
ಅವನು ಗುರಿ
ಮುಟ್ಟಿದ.

ಎಲ್ಲರಿಗು ಗುರಿ ಒಂದೆ: ಸಾರಲು
ಬಟ್ಟೆ ನನ್ನದು ಯಾವುದು?
ತೋರಲಮ್ಮರು ಎಲ್ಲ. ಗುರುವಿನ
ಕರುಣೆ ತೋರಿ[illegible]ಾವುದು.

ಅದೇ ಮುಖ್ಯ.

ಆಸೆಯನು ಗೆಲು: ಆಕ್ಷಣದಲೇ
ಗೆಲಿದೆ ನೀ ಮೂಲೋಕವ:
ಸಿಳ್ಳೆಹಾಕುತ ನೋಡು, ನಾಯ್ ಎನೆ
ಬಳಿಗೆ ಸಾರುವ ನಾಕವ.

ಆಸೆ ಹೋಗಬೇಕು.

ಮೂರು ಲೋಕವ ಗೆಲಿದೆ: ಆಚೆಗೆ — ಸ್ವಾರ್ಥಹೋಗಬೇಕು.
ಒಂದು ನಿಲುವುದು ಗೆಲುವೊಡೆ:
ನಾನು ಎಂಬದು: ಅದನು ಗೆಲ್ಲದೆ
ಇಲ್ಲ ಬ್ರಹ್ಮದಿ ನಿಲುಕಡೆ.

ನಾನು ಎನೆ ಸಂಸಾರ, ಅಂತೇ — ಇದೇ ಮುಕ್ತಿ. ಇದು ಹತ್ತಿರವೇ ಇದೆ.
ನೀನೆನಲು ಸುಖಸಾರವೋ,
ಎನರೆ ಹರಿಸೇವಕರು? ಇಲ್ಲಿಯೆ
ಇಹುದು ಆಚೆಯ ತೀರವೂ.

ತೀರ ಇಲ್ಲಿಯೆ ಇಹುದು; ಒಯ್ಯುವ
ನಾವೆಯೂ ಇಹುದಿಲ್ಲಿಯೆ;
ನಿನ್ನ ಬಿಟ್ಟರೆ ಎಲ್ಲ ಸಿದ್ಧ;
ಬಿಟ್ಟುಳಿಯೆ ನೀ ಒಲ್ಲೆಯೇ!

ಜೀವವೇ ಉದ್ಧಾರಬೇಡವೆ — ದೈವ ಒಲಿದರೆ ಸಿದ್ಧಿಸುತ್ತದೆ.
ನಿನಗೆ? ಗುರಿಯನು ಮರೆಯದೆ
ಸಾಗು; ಇಂಬನು ಕುರಿತು ಸಾಗು;
ಅಲ್ಲಿ ಸುಖದೈಸಿರಿ ಇದೆ.

## ಮೂಕನ ಮಕ್ಕಳು

ಹರಿಯ ಕೃಪೆ ಗುರುವಾಗಿ ಬಂದಿತೆ
ಮುಟ್ಟಬಲ್ಲೆನು ಇಂಬನು ;
ಅಂತರಿಂದಲೆ ಶಿವವೆ ರಕ್ಷಿಸು
ಗುರು ನಮೋ ಬಾ ಎಂಬೆನು.

1100—43. ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಜಿ. ಶ್ರೀನಿವಾಸರಾಯರವರು ಮುದ್ರಿಸಿರುವರು.

# ಶ್ರೀನಿವಾಸ ರಚಿತ

ಕೆಲವು ಸಣ್ಣ ಕತೆಗಳು
ಬಿನ್ನಹ (ಗೀತೆಗಳು)
ಶಾಂತಾ (ಸಣ್ಣ ದೃಶ್ಯ)
ಸಾವಿತ್ರಿ ( ,, )
ಸಣ್ಣ ಕತೆಗಳು
ಸಾಹಿತ್ಯ (ಉಪನ್ಯಾಸ)
ಅರುಣ (ಪದ್ಯಗಳು)
ವಿಮರ್ಶೆ ೧ (ಲೇಖನಗಳು)
ಉಷಾ (ಸಣ್ಣ ದೃಶ್ಯ)
ಸುಬ್ಬಣ್ಣ (ಕತೆ)
ತಾಳೀಕೋಟೆ (ಐತಿಹಾಸಿಕ ದೃಶ್ಯ)
ವಿಮರ್ಶೆ ೨ (ಲೇಖನಗಳು)
ನಾಲ್ಕು ಸಣ್ಣ ಕತೆಗಳು
ಕನ್ನಡದ ಸೇವೆ (ಭಾಷಣ)
ಮಂಜುಳಾ (ಸಾಮಾಜಿಕ ದೃಶ್ಯ)
ತಾವರೆ (ಪದ್ಯಗಳು)
ಕರ್ನಾಟಕದ ಜನತೆಯ ಸಂಸ್ಕೃತಿ
ಚೆಲುವು (ಪದ್ಯಗಳು)
ಶಿವ ಛತ್ರಪತಿ (ಐತಿಹಾಸಿಕ ದೃಶ್ಯ)
ವಿಮರ್ಶೆ ೩ (ಲೇಖನಗಳು)
ಯಶೋಧರಾ (ನಾಟಕ)
ಮಲಾರ (ಪದ್ಯಗಳು)
ಸಣ್ಣ ಕತೆಗಳು ೪
ರವೀಂದ್ರನಾಥ ಠಾಕೂರರು
ಸಣ್ಣ ಕತೆಗಳು ೫
ಶ್ರೀ ರಾಮಕೃಷ್ಣ
ತಿರುಪಾಣಿ
ಕರ್ಣಾಟಕದ ಜನಪದ ಸಾಹಿತ್ಯ
ಕಾಕನಕೋಟೆ
ಆದಿಕವಿ ವಾಲ್ಮೀಕಿ
ವಿಮರ್ಶೆ ೪ (ಲೇಖನಗಳು)
ಸಣ್ಣ ಕತೆಗಳು ೬
ಗೌಡರ ಮಲ್ಲಿ
ರಾಮನವಮಿ

(ಇಂಗ್ಲೀಷಿನಲ್ಲಿ)

Popular Culture in Karnataka
The Poetry of Valmiki
Short Stories (4 Vols.)
Subbanna

ಈ ಪುಸ್ತಕಗಳು ದೊರೆಯುವ ಸ್ಥಳಗಳು :—

ಶ್ರೀನಿವಾಸ ಪುಸ್ತಕ ಭಂಡಾರ, ವಿಶ್ವೇಶ್ವರಪುರ, ಬೆಂಗಳೂರು ಸಿಟಿ
ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ
೪೩–೪೪, ಗವಿಪುರದ ವಿಸ್ತರಣ, ಬಸವನಗುಡಿ ಟಪಾಲು
ಮನೋಹರ ಗ್ರಂಥ ಭಾಂಡಾರ, ಧಾರವಾಡ